**ದಿನಾಂಕ: 25.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಎಂ ಹೆಚ್ ಹೆಚ್ ವಕೀಲರಿಂದಃ**

ನಾನು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದಲ್ಲಿ ಸದಸ್ಯಳಾಗಿರುತ್ತೇನೆ. ಅದರಲ್ಲಿ ಒಟ್ಟು 10 ಜನ ಸದಸ್ಯರಿದ್ದೇವೆ. ಆ ಸಂಘದಲ್ಲಿ ಕನ್ನಡ ಮಾತನಾಡುವ ಸದಸ್ಯರು ಇದ್ದಾರೆ ಎಂದರೆ ಸರಿಯಲ್ಲ. ಆ ಸಂಘದ ನಿರ್ವಾಹಕರು ಕನ್ನಡದಲ್ಲಿಯೇ ಮಾತನಾಡುತ್ತಾರೆ ಎಂದರೆ ಸರಿ. ಹಜರತಅಲಿ ಬಾಳಂಬೀಡ ರವರು ನನ್ನ ತಂದೆ. ನನ್ನ ತಂದೆಗೆ 3 ಜನ ಗಂಡು ಮಕ್ಕಳು ನಾನು ಮಗಳಿದ್ದೇನೆ. ಅವರುಗಳೆಂದರೆ ಹಸನಮಿಯಾ, ಮೌಲಾಲಿ ಮತ್ತು ಮಹ್ಮದರಫಿಕ ಎಂಬುವವರಾಗಿರುತ್ತಾರೆ. ನನ್ನ ಅಣ್ಣ ಮಹ್ಮದರಫಿಯ ವಿರುದ್ಧ ಇದೇ ನಾಯಾಲಯದಲ್ಲಿ ಸಿ ಸಿ ನಂಬರ 506/2020 ರಂತೆ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಆತ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ನಾನು ಮತ್ತು ನನ್ನ ಅಣ್ಣ

ಮಹ್ಹದರಫಿಕ ರವರು ಬೇರೆಯರಿಂದ ಸಾಲ ಪಡೆದು ಚೆಕ್ ನೀಡಿ ಮೋಸ ಮಾಡುವ ಪ್ರವೃತ್ತಿ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ಧರ್ಮಸ್ಥಳದ ಮಂಜುನಾಥ ಸಂಘದ ವತಿಯಿಂದ ನನಗೆ ಸೋಲಾರ್ ಪ್ಲಾಂಟ್ ಮಂಜೂರು ಆಗಿತ್ತು ಎಂದರೆ ಸರಿ. ಆ ಪ್ಲಂಾಟನ್ನು ದೂರುದಾರರಿಗೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಪಡೆದ ಹಣವನ್ನು ವಾಪಸ್ಸು ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್